

## ಭೂಕಂಪ
### ಟರ್ಕಿ-ಸಿರಿಯಾ ತತ್ತರ

ಟರ್ಕಿ ಹಾಗೂ ಸಿರಿಯಾಗಳಲ್ಲಿ ಫೆಬ್ರುವರಿ 6ರಂದು ಸಂಭವಿಸಿದ ಪ್ರಬಲ ಭೂಕಂಪಗಳು 2023ರ ಪ್ರಮುಖ ಪ್ರಾಕೃತಿಕ ವಿಕೋಪಗಳ ಸಾಲಿಗೆ ಸೇರಿವೆ. ಈ ಭೂಕಂಪನಗಳಲ್ಲಿ 59 ಸಾವಿರಕ್ಕೂ ಹೆಚ್ಚು ಸಾವು ಸಂಭವಿಸಿದ್ದರೆ, 1 ಲಕ್ಷ 22 ಸಾವಿರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಆಸ್ತಿಪಾಸ್ತಿ ನಷ್ಟ ಸುಲಭ ಲೆಕ್ಕಕ್ಕೆ ಸಿಗುವಂತಹದ್ದಲ್ಲ.

### ಮುಂದೆ ಸಾಗಲು ರಸ್ತೆ ಇರುತ್ತದೋ ಇಲ್ಲವೋ...




ಇತಿಹಾಸದಿಂದ ಏನೂ ಕಲಿಯುವುದಿಲ್ಲ ಎನ್ನುವುದನ್ನೇ ಇತಿಹಾಸದಿಂದ ಕಲಿತಿದ್ದು ಎನ್ನುವುದು ಈ ವರ್ಷ ಮರುಕಳಿಕೆಯಾದ ಯುದ್ಧಗಳನ್ನು ಕಂಡ ನನಗೆ ಅನ್ನಿಸಿದ್ದು. ಯುದ್ಧ ಬರೀ ಕಾದಾಟ ಮಾತ್ರವಲ್ಲ, ಜಗತ್ತಿನ ನಾಶದ ಸೂಚನೆ.

ನಮ್ಮನ್ನು ನಾವು ನಾಗರಿಕರು–ಮನುಷ್ಯರು ಎಂದು ಹೇಗೆ ಕರೆದುಕೊಳ್ಳುವುದು? ಅದರಲ್ಲೂ ಇಸ್ರೇಲ್– ಹಮಾಸ್ ಯುದ್ಧದಲ್ಲಿ ನಿಷ್ಪಾಪಿ ಜೀವಿಗಳ ಮೇಲೆ, ಮುದ್ದು ಕಂದಮ್ಮಗಳ ಶಾಲೆ ಮೇಲೆ ದಾಳಿ ನಡೆಸುವಷ್ಟು ಕ್ರೌರ್ಯ, ಮೃಗತ್ವ ನಾಗರಿಕ ಮನುಷ್ಯನಲ್ಲಿ ಯಾಕೆ ಮರುಕಳಿಸಿತು ಎಂಬ ಪ್ರಶ್ನೆ ನಿದ್ದೆ–ಎಚ್ಚರಗಳಲ್ಲಿಯೂ ಕಾಡುವಂಥದ್ದು.

ಎಲ್ಲಾ ಕಾಲದಲ್ಲೂ ಯುದ್ಧ ಇದ್ದೇ ಇದ್ದಿತು. ಮನುಷ್ಯನಲ್ಲಿನ ಕ್ರೌರ್ಯ–ಮೃಗತ್ವವೂ ಎಲ್ಲಾ ಕಾಲಕ್ಕೂ ಇದ್ದಿದ್ದೇ. ಆದರೆ ನಮ್ಮ ಕಾಲಕ್ಕೆ ಅದು ಕಾಣಿಸಿಕೊಂಡ ಹೊತ್ತಿನಲ್ಲಿ ತಲ್ಲಣ ಎಂಥದ್ದು ಎನ್ನುವುದು ಅರಿವಾಯಿತು. ಮಕ್ಕಳ ಮುಗ್ಧ ಕಂಗಳಲ್ಲಿ ಜಗತ್ತನ್ನು ನಾವು ಹೇಗೆ ಬಿಂಬಿಸುತ್ತಿದ್ದೇವೆ? ಎಂಬ ಪ್ರಶ್ನೆ ಇಸ್ರೇಲ್–ಹಮಾಸ್ ಯುದ್ಧದ ಚಿತ್ರಗಳನ್ನು ಕಂಡಾಗಲೆಲ್ಲಾ ಕಣ್ಣ ಮುಂದೆ ಬರುತ್ತದೆ.

ಇಲಿಯೆಟ್‌ನ ಒಂದು ಪದ್ಯವಿದೆ:

**ಆಕಾಶದ ಕೆಳಗೆ ಸಂಜೆ ಬಿದ್ದುಕೊಂಡಿದೆ,**
**ಶಸ್ತ್ರಚಿಕಿತ್ಸೆ ಮಾಡುವ ಮುನ್ನ ಅರಿವಳಿಕೆ ಕೊಟ್ಟ ರೋಗಿ**
**ಮೇಜೊಂದರ ಮೇಲೆ ಬಿದ್ದುಕೊಂಡಂತೆ.**
**ಅಂಥ ಒಂದು ಸಂಜೆಯಲ್ಲಿ ನಾನು ನೀನು ವಿಹಾರ ಹೋಗೋಣ.**

ಅಂಥದೊಂದು ಸಂಜೆಯಲ್ಲಿ ನಾವಿದ್ದೇವೆ ಎನ್ನಿಸುತ್ತಿದೆ. ಮುಂದೆ ಸಾಗಲು ರಸ್ತೆ ಇರುತ್ತದೋ ಇಲ್ಲವೋ... ನಾವು ಇರುತ್ತೇವೋ ಇಲ್ಲವೋ...

**-ಎಂ.ಎಸ್. ಆಶಾದೇವಿ**, ಪ್ರಾಧ್ಯಾಪಕಿ, ವಿಮರ್ಶಕಿ

## ಯುದ್ಧ: ತೀರದ ಬಾಯಾರಿಕೆ

ರಷ್ಯಾ ಮತ್ತು ಉಕ್ರೇನ್‌ಗಳ ನಡುವಣ ಯುದ್ಧ ಚಾಲ್ತಿಯಲ್ಲಿರುವಾಗಲೇ ಇಸ್ರೇಲ್ ಮತ್ತು ಹಮಾಸ್ ಭಯೋತ್ಪಾದಕರ ನಡುವಣ ಯುದ್ಧಕ್ಕೆ 2023 ಸಾಕ್ಷಿಯಾಗಿದೆ. ಅಕ್ಟೋಬರ್ 7ರಂದು 3000ಕ್ಕೂ ಹೆಚ್ಚು ಹಮಾಸ್ ಉಗ್ರರು, ಗಾಜಾ ಪಟ್ಟಿಯಿಂದ ನುಸುಳಿ ಇಸ್ರೇಲ್ ಗಡಿಯೊಳಗೆ ಪ್ರವೇಶಿಸುವುದರೊಂದಿಗೆ ಸಂಘರ್ಷ ಆರಂಭವಾಯಿತು. ಹಲವು ಇಸ್ರೇಲ್ ನೆಲೆಗಳನ್ನು ವಶಪಡಿಸಿಕೊಂಡಿದ್ದ ಹಮಾಸ್ ಉಗ್ರರು, ಸಾವಿರಾರು ಜನರನ್ನು ಕೊಂದು, 240ಕ್ಕೂ ಹೆಚ್ಚು ಜನರನ್ನು ಒತ್ತೆಯಾಳುಗಳನ್ನಾಗಿ ಇರಿಸಿಕೊಂಡರು. ಇದರಿಂದ ಕುಪಿತಗೊಂಡ ಇಸ್ರೇಲ್ ಮರುದಾಳಿ ನಡೆಸುವುದರೊಂದಿಗೆ ಯುದ್ಧ ತೀವ್ರಗೊಂಡಿದೆ. ಪ್ಯಾಲೆಸ್ಟೀನ್‌ನಲ್ಲಿ ನೆಲೆ ಮಾಡಿಕೊಂಡಿದ್ದಾರೆ ಎನ್ನಲಾದ ಹಮಾಸ್ ಉಗ್ರರ ವಿರುದ್ಧ ಇಸ್ರೇಲ್ ಮುಗಿಬಿದ್ದಿದ್ದು, ಈ ಸಂಘರ್ಷದಲ್ಲಿ ಅಪಾರ ಸಾವುನೋವು ಸಂಭವಿಸಿದೆ.

ದೊಡ್ಡವರು ಮಾತ್ರವಲ್ಲದೆ, ಮಕ್ಕಳು ಕೂಡ ಯುದ್ಧಕ್ಕೆ ಬಲಿಯಾಗುತ್ತಿದ್ದಾರೆ. ಯುದ್ಧದಲ್ಲಿ 18 ವರ್ಷದೊಳಗಿನ 3760 ಪ್ಯಾಲೆಸ್ಟೀನ್ ಮಕ್ಕಳು ಮೊದಲ ಮೂರು ವಾರಗಳ ಸಂಘರ್ಷದಲ್ಲಿ ಮೃತಪಟ್ಟಿದ್ದಾರೆ ಎಂದು ಗಾಜಾ ಪಟ್ಟಿಯ ಆರೋಗ್ಯ ಸಚಿವಾಲಯ ಹೇಳಿದೆ. ಸಾವಿಗೀಡಾದ